ವೈಭವ, ಸಂಪತ್ತು, ಪೂಜೆ, ಆಹಾರ ರುಚಿಯನ್ನೆಲ್ಲ ಚೆನ್ನಯ್ಯನ ಗುಡಿಸಲಿಗೆ ವರ್ಗಾಯಿಸಿಬಿಡುತ್ತಾನೆ. ತನ್ನ ಸನಿಹಕ್ಕೆ ಬಂದ ಚೋಳ ದೊರೆಯನ್ನು ಚೆನ್ನ 'ಎನ್ನ ಕುಲಮಂ ನೋಡದಿಂತು ಬರ್ಪರೇ ಚೋಳ, ಎನ್ನ ಜಾತಿಯನರಿಯದಿಂತು ಮಾಳ್ಪರೇ ಚೋಳ' ಎಂದರೆ ಇದಕ್ಕೆ ಉತ್ತರವಾಗಿ ದೊರೆಯು,

ದೇವ ದೇವ ನೊಲಿದವನ ಕುಲಂ ಸತ್ಕಲಂ
ಘನ ಮಹಿಮನೊಲಿದ ಜಾತಿಯೆ ಜಾತಿ ನಿರ್ಮಲಂ...

ಸರ್ವಜ್ಞ 'ನಿಮ್ಮ ಕೆರ್ಪಿಂಗೆನ್ನ ಶಿರ ಸರಿಯೇ...' ಎನ್ನುತ್ತಾನೆ. ಇಷ್ಟಕ್ಕೂ ಸಮಾಧಾನಗೊಳ್ಳದ ಮಾದರ ಚೆನ್ನ ತಾನು ನಂಬಿದ ಶಿವನನ್ನೂ ಆಕ್ಷೇಪಿಸುತ್ತಾನೆ.

ಹೇಳಯ್ಯ ನಿನ್ನಂ ಪದವಿಯಂ ಬೇಡಿದೆನೆ
ಅರಿಯದಂಬಲಿಯನರ್ಪಿಸಿದೊಡಿಂತಿರಿವರೆ
ಹೆರೆ ಸೂಡಿದನೇ ತೋರಿ ತೋರಿ ನೆರೆ ದೂರುವರೆ
ಮೇದಿನಿಗೆ ಬೀರಿ ಗುರುವಾದುದೆನ್ನಯಭಕ್ತಿ

ವಾದಕ್ಕೆ ಹರಲೆಯಂ ತಂದಿಕ್ಕಿತೀ ಭಕ್ತಿ... ಎನ್ನುವಲ್ಲಿ ಶಿವನೇ ಮಾದರ ಚನ್ನನನ್ನು ಕ್ಷಮೆ ಕೇಳುವ ಧಾಟಿಯಲ್ಲಿ 'ಮರೆದು ಚೋಳಂಗೆ ಪೇಳ್ದಡೆ ಕೋಪವಿನಿಸೇಕೆ...' ಎಂದು ಸಮಾಧಾನಗೊಳಿಸುತ್ತಾನೆ. ಒಟ್ಟು ಈ ದೃಶ್ಯವೇ ನಾಟಕೀಯವಾಗಿದೆ. 'ಆಡಂಬರದ ಭಕ್ತಿಯನುಳಿದ ಮಹಾಭಿಮಾನಿ ಚೆನ್ನ ನನ್ನನ್ನು ಕಾಪಾಡಲಿ' ಎಂದು ಹರಿಹರ ಕಥನದ ಕೊನೆಯಲ್ಲಿ ತಾನೇ ಬೇಡಿಕೊಳ್ಳುತ್ತಾನೆ. ಇದೇ ವ್ಯಕ್ತಿತ್ವದ ಘನತೆಯ ಮಾತು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ದಾಸರ ದಾಸ, ಭಕ್ತರ ಭಕ್ತ, ಅಡಿಯೇನ್, ತಮ್ಮಡಿ ಈ ಪದಗಳೆಲ್ಲ ಮುಂದುವರೆದು ಬಂದಿವೆ. ಇಂಥದೊಂದು ವಿನೀತ ಶರಣ ಭಾವವನ್ನು ಹುಟ್ಟುಹಾಕಿದವರು ವಚನಕಾರರು, ಹರಿಹರ ಮತ್ತು ಕೀರ್ತನಕಾರರು.

★★★

ಪಂಪ ತನ್ನ ಎರಡು ಕೃತಿಗಳಲ್ಲಿ ಪ್ರಾಸಂಗಿಕವಾಗಿ ಪುಷ್ಪ ಪ್ರೀತಿಯನ್ನು ತೋರಿದರೆ ಹರಿಹರನಿಗೆ ಅವನ ಪಾತ್ರಗಳಷ್ಟೇ ಲೋಕದ ಜೀವಿಗಳನ್ನು ಪೊರೆಯುವ ಪ್ರಕೃತಿಯೂ ಮುಖ್ಯ. ಹಾಗಾಗಿ ಹರಿಹರ ಲೋಕದ ಸಮಸ್ತ ಚರಾಚರಗಳನ್ನು ಮೈದುಂಬಿ ವರ್ಣಿಸುತ್ತಾನೆ. ವಿರೂಪಾಕ್ಷನ ಪೂಜೆಗೆಂದು ಕೈಯಲ್ಲಿ ಬುಟ್ಟಿ ಹಿಡಿದು ತೋಟಕ್ಕೆ ಬಂದರೆ ಆ ಹೂಗಳನ್ನು ಗಿಡದಿಂದ ಬೇರ್ಪಡಿಸುವುದೇ ಅವನಿಗೊಂದು ಸಮಸ್ಯೆ! ದೈವದಿಂದ ಸಜ್ಜನರನ್ನು ಹೇಗೆ ಹರಿಹರ ಬಿಡಿಸಲಾರನೋ, ದೈವ, ಮನುಷ್ಯಜೀವ ಒಂದಾಗುವುದಾದರೆ ಹೇಗೆ ಅವನಿಗೆ ಅಮಿತಾನಂದವೋ ಹಾಗೆ ಹೂಗಳು ಗಿಡದ ಮೇಲಿರುವುದೇ ಸಂತೋಷ. ಓದುಗರು ವರ್ಡ್ಸ್‌ವರ್ತ್ ಕವಿಯ ಪುಷ್ಪಪ್ರೀತಿ, ಪ್ರಕೃತಿ ಪ್ರೀತಿಯನ್ನು ಗಮನಿಸುವ ಮೊದಲು ಹರಿಹರನ ಪುಷ್ಪ ರಗಳೆಯನ್ನು ಅರಿಯಬೇಕು.

ಹೂವೇ ಬಿಡದ ದವನದ ಎಲೆಗಳ ಸುವಾಸನೆಯನ್ನು ಕಂಡು 'ದವನವೇ ಶಿವನ ಹಬ್ಬದ ಪರಿಮಳವೇ ಬಾರ' ಎನ್ನುತ್ತಾನೆ. ಜಾಜಿ ಗಿಡದ ಮುಂದೆ ನಿಂತು 'ಜಾತಿ ನೀನೇ ಸಕಲ ಪುಷ್ಪ ಜಾತಿಗೆ ಜಾತಿ, ಭೂತೇಶ್ವರನ ಜಡೆಯ ಮುಡಿಗೇರಿದೊಡೆ ನೀನೇ ಜಾತಿ' ಅಂದರೆ ಸಂಪಿಗೆಯ ಮರ ಕಂಡು 'ಏನವ್ವ ಸಂಪಿಗೆಯೆ ಶಿವನ ಸಿರಿ ಮುಡಿಗಿಂದು| ನೀನೀವ ಪೊಸ ಕುಸಮಮಂ ನೀಡವ್ವ ನೀಡು' ಎಂದು ಬೇಡುತ್ತಾನೆ. ಹರಿಹರನ ಪ್ರಕಾರ ಪ್ರಕೃತಿಯೆಲ್ಲವೂ ವಿಶ್ವಚೈತನ್ಯ ಶಕ್ತಿಯ ಅಂಗೋಪಾಂಗ. ಅವು ದೈವದ ಕೊಡುಗೆಯೇ. ಪ್ರಕೃತಿ ಶ್ರೀಮಂತವಾದುದು, ಅದಕ್ಕೆ ಬಡತನವೇನಾದರೂ ಅಡಸುವುದಾದರೆ ಮನುಷ್ಯ ಮಾತ್ರರಿಂದಲೇ ಆಗಬೇಕು!